# ಗಾಳಿಪಟ

■ ಗುಂಡುರಾವ್ ದೇಸಾಯಿ

‘ರೀ ನೀವು ಹೇಳತಿರೊ ಇಲ್ಲೊ? ಇವನ ಕಾಲಗ ಸಾಕು ಸಾಕಾಗಿಬಿಟ್ಟದ. ಒಂದು ಪೇಪರ್ ಉಳಿವಲ್ಲು, ರೀಲ್ ದಾರ ಉಳಿವಲ್ಲು, ಕಸಬರಿಗೆ ಕಡ್ಡಿ ಉಳಿವಲ್ಲು’ ಅನ್ನುತ್ತಿರುವಾಗಲೇ ‘ಅಪ್ಪ ನನ್ನ ಅಂಟು, ಫೆವಿಕಾಲ್, ಟಿಕ್ಸೊಟೇಪ್ ಉಳಿವಲ್ಲು’ ಎಂದು ಮಗಳು ಧ್ವನಿ ಸೇರಿಸಿದಳು. ಅಷ್ಟರೊಳಗ ‘ಲೋ ನೋಡೋ ಅಲ್ಲಿ ಮತ್ತೆ ಪೇಪರ್ ತಗೊಂಡು ಹೊಂಟಾನ ಮಗ ಎಂತಹವನು ಹುಟ್ಟಿದನಪ’ ಎಂದು ಅವ್ವ ಹಣೆಹಣೆ ಜಜ್ಜಿಕೊಂಡು ಕೂಗ್ಯಾಡಕತಿದ್ಲು. ಒಳಗಿದ್ದ ನನಗೆ ಸೂಕ್ಷ್ಮ ಅರ್ಥ ಆಯ್ತು ‘ಇದು ಮಗನ ಗಾಳಿಪಟದ ಕಿತಾಪತಿ’ ಅಂತ.

ಹೊರಗೆ ಬರುತ್ತಲೆ ‘ನಿಮ್ಮ ಕುಮ್ಮಕ್ಕಿನಿಂದ ಹೀಗ ಆಗಕತಾನ’ ಅಂದ್ಲು ಅವರಮ್ಮ.

‘ಸಮುದು’ ಯಾವಾಗಲೂ ಹೀಗೆ, ಒಂದು ಬರೋತನ ಬಿಡದ ಪ್ರಯತ್ನವಾದಿ. ಒಮ್ಮೆ ದೊಡ್ಡ ಮಕ್ಕಳು ಬುಗುರಿ ಆಡೋದನ್ನ ನೋಡಿ ದುಂಬಾಲು ಬಿದ್ದ.

‘ಬಾಲ್ಯದಲ್ಲಿ ನಾವು ಕಟ್ಟಿಗೆ ಬುಗರಿಯಲ್ಲಿ ಆಡತಿದ್ವಿ’ ಎಂದು ರಂಜನೀಯವಾಗಿ ಹೇಳಿದ್ದೆ ತಪ್ಪಾಯ್ತೇನೊ ‘ನನಗೂ ಕಟ್ಟಿಗೆ ಬುಗುರಿ ಬೇಕು’ ಎಂದು ಹಟಕ್ಕೆ ಬಿದ್ದ.

‘ಈಗ ಎಲ್ಲಿ ಸಿಗತಾವೊ ಅವು?’ ಎಂದಾಗ ಮೊಬೈಲ್‌ನಲ್ಲಿ ತೋರಿಸಿ ‘ಆರ್ಡರ್ ಮಾಡು’ ಎಂದು ದುಂಬಾಲು ಬಿದ್ದು ಮಾಡಿಸಿಕೊಂಡ. ಅದು ಬಂದ ಮೇಲೆ ಆಡಿಸಬೇಕಲ್ಲ.

‘ಅಪ್ಪಾ... ಅಪ್ಪಾ ಆಡವಲ್ತು’ ಅಂತ ಒದ್ದಾಡಿದ.

ಆಡಿಸಿ ತೋರಿಸಿ ‘ಪ್ರಯತ್ನ ಮಾಡೋ’ ಅಂದೆ.

ಪ್ರಯತ್ನ ಮಾಡಿ ಸೋತು. ‘ನೀನಗ? ಯಾಕ ಬರುತ್ತದ, ನನಗ ಬರವಲ್ತು’ ಎಂದು ಒದ್ದಾಡಿದ.

‘ಮರಳಿ ಯತ್ನವ ಮಾಡು’ ಎಂದೆ.

ಒಂದು ವಾರವಾದ ಮೇಲೆ ‘ಅಪ್ಪ ನೋಡು ಇಲ್ಲಿ’ ಎಂದು ಕೈಯಲ್ಲಿ ತಿರುಗುವ ಬುಗುರಿಯನ್ನು ಹಾಕಿಕೊಂಡು ಬಂದ. ನನಗೆ ಆಶ್ಚರ್ಯ ಮತ್ತು ಖುಷಿ ಎರಡೂ ಆಯ್ತು. ನನ್ನ ಬಾಲ್ಯದಲ್ಲಿ ಹಾಗೆ ಹಾಕಿಕೊಳ್ಳಲು ನನಗೆ ಸಾಧ್ಯ ಆಗಿರಲಿಲ್ಲ.

‘ನೀನೇ ಏನೋ ಹಾಕಿಕೊಂಡಿದ್ದು?’

‘ಹೌದಪ್ಪ ನಾನೇ? ಹಾಕಿಕೊಳ್ಳಕ್ಕ ಬರುತ್ತದ’ ಎಂದು ಅಂಗೈಯಲ್ಲಿ ಹಾಕಿಕೊಂಡು ನನ್ನ ಕೈಮೇಲು ಹಾಕಿದ.

ಮಗಳು ‘ನನ್ನ ಕೈಮೇಲೆ ಹಾಕೊ?’ ಅಂದ್ಲು.

‘ನೀನು ಚಾಕೊಲೇಟ ಕೊಟ್ರೆ? ಹಾಕತೀನಿ’ ಎಂದ.

‘ಯಾವಾಗಲೂ ಬರೀ ಲಂಚಕೇಳತಾನ ಭಂಡ ಇವ’ ಎಂದು ಶೆಟಗೊಂಡು ಹೊರಟಾಗ.

‘ಬಾರಕ್ಕ’ ಎಂದು ಜಾಳಿಗೆ ಬೀಸಿ ಹಾಕಿದ ಖುಷಿಯಿಂದ ಕುಪ್ಪಳಿಸಿದಳು.

ಮೊನ್ನೆ ಗಾಳಿಪಟ ಮಾಡಿಕೊಡು ಅಂದ. ಮರೆತುಬಿಟ್ಟಿರುವೆ ನೀನೇ ಪ್ರಯತ್ನ ಮಾಡೋ ಅಂತ ಹೇಳಿದ್ದೆ. ‘ಅಪ್ಪಾ, ಮನ್ಯಾಗ ಇದ್ದಾಗ ನೀನು ಮೊಬೈಲ್ ಕೊಡು, ವಿಡಿಯೊ ನೋಡಿ ಮಾಡ್ತಿನಿ’ ಅಂದ.

‘ಸರಿ’ ಅಂದೆ.

ಮನೆಯಲ್ಲಿರುವಾಗ ಕೇಳಿ, ಫೋನ್ ಹಿಡಕೊಂಡು ‘ಹೌ ಟು ಮೇಕ್ ಕೈಟ್?’ ಅಂತ ಒತ್ತಿದ. ಯೂಟ್ಯೂಬಿನ್ಯಾಗ ಮಾಹಿತಿ ಬರುತಿತ್ತು. ಅದರಂಗ ನೋಡಿ ಮಾಡವ. ಮಾಡಿದ ಮೇಲೆ ‘ಬಾರಪ್ಪ ಹಾರಸ್ತೀನಿ ನೋಡು’ ಅಂತ ಮನೆ ಮಾಳಿಗೆ ಕರದೊಯ್ಯತ್ತಿದ್ದ ಹಾರಸಾಕ ಪ್ರಯತ್ನ ಮಾಡತಿದ್ದ. ಹಾರದೆ ಇದ್ದಾಗ ಸೋತು ‘ಅಪ್ಪ ಅಪ್ಪ ಇನ್ನೊಂದು ಚಾನ್ಸು ಕೆಳಗ ಬಾ ಅನ್ನವ’ ಓಣಿ ತುಂಬ ಓಡಾಡೋನು. ಗಾಳಿಪಟ ಮಾಡೋದು ಹಾರಸೋಕೆ ಓಡಿ ಓಡಿ ಹೋಗೋದು ವಿಫಲ ಆಗೋದು ನೋಡಿ ‘ಯಾರನ್ನಾದರೂ ಕೇಳಿ ಸೂತ್ರ ಹಾಕಿಸೋ’ ಅಂದ್ರ ‘ಇಲ್ಲಪ, ನಾನೇ ಪ್ರಯತ್ನ ಮಾಡ್ತೀನಿ’ ಅಂತ ಮುಂದುವರಿಸಿದ. ಒಂದು ರಾತ್ರಿ ‘ಅಪ್ಪಾ, ನಾಳೆ ಲಾಸ್ಟ್ ಚಾನ್ಸ್, ಹೇಗಾದರೂ ಮಾಡಿ ಅಮ್ಮನ ಅಲಮಾರಿಯಿಂದ ರೀಲ್ ದಾರ ಎಗರಿಸಿ ಕೊಡು, ಇನ್ನೊಮ್ಮೆ ಹಾರಲಿಕ್ಕ ಅಂದ್ರ ನಾನು ಗಾಳಿಪಟದ ಸುದ್ದೀನ ಎತ್ತಲ್ಲ’ ಎಂದ. ‘ಬೇಡ ಸಮು, ಯಾಕ ವೇಸ್ಟ್ ಮಾಡ್ತಿ? ಅದರ ಬದಲು ಓದು’ ಅಂದ್ರೂ, ‘ಅಪ್ಪಾ ಪ್ಲೀಸ್... ಪ್ಲೀಸ್’ ಎಂದು ಗಂಟುಬಿದ್ದಾಗ, ಆಕಿಗೆ ಗೊತ್ತಾಗದ ಹಾಗೆ ಕೊಟ್ಟೆ.

ಸಂಜೆ ಹೊರಗೆ ಹೋಗಿದ್ದಾಗ ಈಕಿ ಫೋನ್ ಹಚ್ಚಿ ‘ಬರ್ರಿ... ಬೇಗ’ ಅಂದಳು.

‘ಏನಾಯ್ತೆ?’ ಎಂದೆ.

‘ಏನಿಲ್ಲ... ಬರ್ರಿ ಅಷ್ಟ’ ಎಂದು ಫೋನ್ ಇಟ್ಲು.


ಸ್ವಲ್ಪ ಭಯದಿಂದ ಓಡೋಡಿ ಬಂದೆ. ಬಾಗಿಲಲ್ಲಿ ಕುಳಿತಿದ್ದ ಅಮ್ಮ ‘ನೋಡಲ್ಲಿ ನಿಮ್ಮ ಮಗ ಏನು ಮಾಡ್ಯಾನ ಮ್ಯಾಲೆ’ ಎಂದು ತೋರಿಸಿದ್ಲು.

‘ನೋಡ್ರಲ್ಲಿ ನೋಡ್ರಲ್ಲಿ’ ಎಂದು ಸಂಭ್ರಮಿಸ್ತಿದ್ಲು.

‘ಅಪ್ಪ ನೋಡಲ್ಲಿ ಸಮು ಎಲ್ಲಿವರೆಗೆ ಗಾಳಿ ಪಟ ಹಾರಿಸ್ಯಾನ?’ ಎಂದು ಅವನೊಂದಿಗೆ ಅಕ್ಕ ದಾರ ಹಿಡಿದು ಸಂಭ್ರಮಿಸುತ್ತಿದ್ಲು.

ಮೇಲೆ ಪಟ ಹಾರುತ್ತಿತ್ತು. ಬಹುದೂರ ಸಾಗಿತ್ತು.

ಮಗ ‘ಅಪ್ಪಾ ಅಪ್ಪಾ... ಗಾಳಿಪಟಕ್ಕ ಡಾನ್ಸ್ ಮಾಡಿಸಲಾಪ’ ಅಂತ ದಾರನ್ನ ಜಗ್ಗಿ ಜಗ್ಗಿ ಪಟನ್ನ ಕುಣಿಸಿ ಕುಣಿಸಿ ತೋರಿಸ್ತಿದ್ದ. ಗೆಲವು ಸಾಧಿಸಿದ ಉತ್ಸಾಹ ಅವನ ಕಂಗಳಲ್ಲಿತ್ತು. ■



ಸಂತೋಷ್ ಸಸಿಹಿತ್ಲು